ಬಹುಶಃ ಅವಳ ಮಡಿವಂತಿಕೆಯ ಸ್ವಭಾವದ ಕಾರಣ ಇಂಥ ವಾತಾವರಣ ಅವಳಿಗೆ ಒಗ್ಗದೆನಿಸಿ, ನಾನೇ ಪಾರ್ಟಿಯನ್ನು ಹೊರಗೆಲ್ಲಾದರೂ ಆಚರಿಸಬಹುದಿತ್ತೆಂದು ತಪ್ಪೊಪ್ಪಿಕೊಂಡು ಆ ವಿಷಯ ಮತ್ತೆ ಬೆಳೆಸಲು ಹೋಗದೇ ಬಿಟ್ಟುಬಿಟ್ಟೆದ್ದೆ.''

'ನಿಮ್ಮ ಬಿಸಿನೆಸ್ ವಿಚಾರಗಳಲ್ಲಿ ಆಕೆ ತಲೆ ಹಾಕುತ್ತಾರಾ? ನಿಮ್ಮ ಕಚೇರಿಗೆ ಆಕೆ ಬಂದು, ಹೋಗುವುದುಂಟೇ?'

'ಇಲ್ಲ ಮೇಡಮ್. ಆಕೆ ಇಷ್ಟು ಕಾಲದಲ್ಲಿ ಆಯುಧ ಪೂಜೆಯ ದಿನ ನಮ್ಮ ಕಚೇರಿಗೆ ಬಂದು ಹೋಗಿರಬಹುದು. ಆಕೆ ತಾನಾಯಿತು, ತನ್ನ ಮನೆ ಆಯಿತು. ಮಗಳು ಆಯಿತು. ಇವಿಷ್ಟೇ ಅವಳ ಪ್ರಪಂಚ. ಎಲ್ಲವೂ ಸರಿಯಾಗೇ ಇತ್ತು. ಇದ್ದಕ್ಕಿದ್ದಂತೆ ಈ ಸಂಗತಿ ಜರುಗಿದ್ದು ನೋಡಿ ನನಗೇ ಆಘಾತವಾಯಿತು. ಆದರೆ ನಾನು ಕಣ್ಣಾರೆ ನೋಡಿದ ಸಂಗತಿಯನ್ನು ಆಕೆ ಅಲ್ಲಗಳೆಯುತ್ತಾಳೆ. ಅವಳ ಹೆತ್ತವರೂ ನಂಬುತ್ತಿಲ್ಲ. ಅವರು ಬಿಡಿ, ಮೊದಲು ನಾನೇ ನನ್ನ ಕಣ್ಣುಗಳನ್ನು ನಂಬದೇ ದಿಗ್ಭ್ರಾಂತನಾಗಿದ್ದೆ! ಆಕೆ ಎರಡು ಬಾರಿ ಹೀಗೆ ಮಾಡಿದ್ದಾಳೆ ನೋಡಿ'.

'ಮೊದಲ ದಿನ ನೀವು ನೋಡಿದ್ದು ಎಂದಿರಲ್ಲ, ಆ ದಿನ ನೆನಪಿದೆಯೇ? ತಾರೀಕು, ದಿನ?' ಡಾ. ರೂಪಾ ಆತ ಹೇಳಿದ್ದನ್ನೆಲ್ಲವೂ ಚುಟುಕಾಗಿ, ಘಟನೆಗಳನ್ನು ಬರೆದುಕೊಳ್ಳುತ್ತಾ ಒಂದಷ್ಟು ನಿವಿಯ ವರ್ತನೆಯನ್ನು ತಾಳೆ ಹಾಕಿ ಆಕೆಯ ಅಂತರಂಗದೊಳಗೆ ಒಂದು ಸುತ್ತು ಹಾಕುವ ಯತ್ನ ನಡೆಸುತ್ತಿದ್ದರು. ಅದೆಲ್ಲ ಆಕೆಯನ್ನು ಹತ್ತಿರದಿಂದ ಕಂಡ ಏಕೈಕ ವ್ಯಕ್ತಿ ಪ್ರದೀಪನ ಸಹಕಾರದಿಂದ ಮಾತ್ರ ಸಾಧ್ಯವಿತ್ತು.

ಪ್ರದೀಪ ಆ ಘಟನೆ ನಡೆದ ದಿನ ನೆನಪು ಮಾಡಿಕೊಳ್ಳಲು ಯತ್ನಿಸಿದ.

'ಆ ದಿನ ನನ್ನ ಆಗ್ರಾ ಟ್ರಿಪ್ ಇತ್ತು. ಮನೆಗೆ ಬೇಗ ಬಂದು ಸ್ವಲ್ಪ ಹೊತ್ತು ನಿವಿ ಮತ್ತು ಮಗು ಜೊತೆ ಕಾಲ ಕಳೆದು ನಂತರ ತಯಾರಾಗಿ ಏರ್‌ಪೋರ್ಟ್‌ಗೆ ಹೋಗುವುದೆಂದು ಭಾವಿಸಿ ಮನೆಯಲ್ಲಿ ತಿಳಿಸದೇ ಅಚ್ಚರಿಯ ಭೇಟಿ ಕೊಡುವುದೆಂದು ಬಂದಿದ್ದೆ. ಆದರೆ ಅಲ್ಲಿ ನೋಡಿದ ಘಟನೆ ಕಂಡು ಆಘಾತಕ್ಕೊಳಗಾದೆ. ತುಂಬಾ ವಿಚಲಿತನಾದ ಕಾರಣ ನನ್ನ ಟ್ರಿಪ್ ಕ್ಯಾನ್ಸಲ್ ಮಾಡಿಸಿದೆ' ಎನ್ನುತ್ತಾ, ಇರಿ, ನನ್ನ ಆಫೀಸ್‌ಗೆ ಕರೆ ಮಾಡಿ ವಿಚಾರಿಸಿ ಡೇಟ್ ಹೇಳ್ತೀನಿ ಎಂದ. ಕಚೇರಿಯ ಅಂಕಿತಾಳಿಗೆ ಕರೆ ಮಾಡಿ ಆಗ್ರಾಗೆ ಹೊರಟು, ಬಳಿಕ ಟಿಕೆಟ್ ಕ್ಯಾನ್ಸಲ್ ಮಾಡಿಸಿದ ದಿನಾಂಕ ಕೇಳಿ ಪಡೆದು ಅದನ್ನು ಡಾ. ರೂಪಾರಿಗೆ ತಿಳಿಸಿದ. ಆಕೆ ಅದನ್ನು ತನ್ನ ಡೈರಿಯಲ್ಲಿ ಬರೆದುಕೊಂಡರು.

'ಇಂಥ ಘಟನೆ ಇದಕ್ಕೂ ಮುಂಚೆ ಎಂದೂ ನಡೆದದ್ದು ನಿಮ್ಮ ಅರಿವಿಗೆ ಬಂದಿಲ್ಲ ಅಲ್ವಾ?'

'ಇಲ್ಲ. ನನಗೆ ಅರಿವಿಗೆ ಬಂದಿಲ್ಲ'.

'ಮಗುವಿನ ವಿಚಾರದಲ್ಲಿ ಹೇಳಿ. ನಿಮಗೆ ಗಂಡು ಮಗು ಬೇಕಿತ್ತೋ, ಹೆಣ್ಣೋ?'

'ನನ್ಗೆ ಹೆಣ್ಣು ಮಗುವೇ ಅಪೇಕ್ಷೆ ಇದ್ದದ್ದು. ನನಗೆ ನಿಧಿ ಹುಟ್ಟಿದಾಗ ಆದ ಸಂತೋಷಕ್ಕೆ ಪಾರವೇ ಇಲ್ಲ ಗೊತ್ತಾ? ನನ್ನ ಜೀವ, ನನ್ನ ಜಗತ್ತು ನನ್ನ ಮಗಳು. ಅದಿಕ್ಕೇ ನಿಧಿ ಎಂದು ಹೆಸರಿಟ್ಟದ್ದು' ಅವನ ಖುಷಿ ಅವನ ದನಿಯಲ್ಲೂ, ಮುಖದಲ್ಲೂ ತುಳುಕಿದ್ದು ಡಾ. ರೂಪಾರ ಅರಿವಿಗೂ ಬಂದಿತ್ತು.

'ಮತ್ತೆ ನಿವೇದಿತಾ? ಆಕೆಗೆ ಮಗು ಆಗುವುದು ಇಷ್ಟವಿರಲಿಲ್ಲವಾ? ಆಕೆ ಅಂಥ ಪ್ರಯತ್ನ ಏಕೆ ಮಾಡಿದರು? ಹೆಣ್ಣು ಮಗು ಆಕೆಗೆ ಬೇಡವಿತ್ತಾ?'

ಪ್ರದೀಪನ ಮುಖ ಪೆಚ್ಚಾಯಿತು. 'ಗೊತ್ತಿಲ್ಲ, ಆದರೆ ಆಕೆ ತಾಯಿಯಾದ ಬಳಿಕ ಏಕೋ ತೀರಾ ಮೌನವಾದಳು. ಅವಳ ಜಗತ್ತೇ ಬದಲಾಯಿತು. ಏಕೋ ನನ್ನಿಂದಲೂ ಅಂತರ ಕಾಪಾಡಿಕೊಂಡಂತೆ ಅನ್ನಿಸಿದ್ದು ಸುಳ್ಳಲ್ಲ. ಆಕೆಗೆ ಗಂಡು ಮಗು ಬೇಕಿತ್ತೇನೋ' ಎಂದ.

'ಹಾಗೆಂದು ಹೇಳಿಕೊಂಡರೇ?'

'ಇಲ್ಲ, ಅವಳ ವರ್ತನೆಯಿಂದ ನನಗೆ ಹಾಗೆ ಭಾಸವಾಯಿತು'.

'ಅವರು ಮಗುವನ್ನು ನಿರ್ಲಕ್ಷ್ಯ ಮಾಡುತ್ತಿದ್ದರಾ?'

'ಇಲ್ಲ'.

'ಮತ್ತೆ ನಿಮಗೆ ಹಾಗನ್ನಿಸಲು ಕಾರಣವೇನು?'

'ಹೆಣ್ಣು ಮಗು ಎಂದು ಮೊದಲು ತಿಳಿಸಿದಾಗ ನಿವಿ ತುಂಬಾ ಅತ್ತು ಬಿಟ್ಟಳು. ಅವರ ಅಮ್ಮ ಸಮಾಧಾನಿಸಿದ ನಂತರ ಸರಿಹೋದಳು. ಆದರೆ ನಿರ್ಲಕ್ಷ್ಯ ಮಾಡಲಿಲ್ಲ. ಬದಲಿಗೆ ಅತಿಯಾದ ರಕ್ಷಣಾಭಾವ ಇದೆ. ಮಗುವನ್ನು ಯಾರ ಕೈಗೂ ಹೆಚ್ಚು ಕೊಡುವುದಿಲ್ಲ. ನೀವು ನಂಬುತ್ತೀರೋ ಇಲ್ಲವೋ, ನನ್ನ ಬಳಿಯೂ ಹೆಚ್ಚು ಇರಲು ಬಿಡುವುದಿಲ್ಲ. ನಾನು ಹಾಲ್‌ನಲ್ಲಿ ಮಗುವನ್ನು ಎತ್ತಿಕೊಂಡಿರುವಾಗ ಆಕೆ ಬಂದು ನನ್ನಿಂದ ಮಗುವನ್ನು ಕಸಿದುಕೊಂಡು ಹೋಗಿದ್ದೂ ಇದೆ. ಆಗೆಲ್ಲಾ ಅವಳು ಬೇರೆಯೇ ನಿವಿಯಾಗಿ ಕಾಣಿಸುತ್ತಾಳೆ'

'ಯಾಕೆ ಹಾಗೆ?'

'ಮಗುವಿಗೆ ನಾವು ಏನಾದರೂ ಅಪಾಯ ತಂದೊಡ್ಡುತ್ತೇವೋ ಎಂಬ ಭಯ ಇರಬಹುದು. ಅವತ್ತು ಪಾರ್ಟಿ ರದ್ದಾಗಲು ಅವಳ ಈ ಮನೋಭಾವವೇ ಕಾರಣವಿರಬಹುದು ಎಂದು ಈಗ, ನನಗೆ ಎಲ್ಲವನ್ನೂ ತಾಳೆ ಹಾಕುವಾಗ ಭಾಸವಾಗುತ್ತಿದೆ. ಅವಳಲ್ಲಿ ಈ ಅಸುರಕ್ಷತೆ, ಭಯ ಏಕೆಂದು ನನಗೆ ಗೊತ್ತಾಗುತ್ತಿಲ್ಲ' ಎಂದ.

'ಆಕೆ ನಿಮ್ಮ ಬಳಿ ತನ್ನ ಜೀವನದ ಹಿಂದಿನ ಘಟನೆಗಳನ್ನು ಮೆಲುಕು ಹಾಕಿಕೊಳ್ಳುತ್ತಾರಾ? ತನ್ನ ಕಾಲೇಜು, ಸ್ನೇಹಿತೆಯರು, ಕುಟುಂಬ, ಹೆತ್ತವರ ಬಗ್ಗೆ, ಆಕೆಯ ಮದುವೆಯ ಹಿಂದಿನ ಸಂಗತಿಗಳು ನಿಮಗೆಷ್ಟು ಗೊತ್ತು?'

ಪ್ರದೀಪ ಮುಖ ಪೇಲವವಾಗಿಸಿದ, 'ನೋ ಐಡಿಯಾ. ಸ್ವಲ್ಪ ಕೂಡ ಸುಳಿವಿಲ್ಲ. ಅದೆಲ್ಲ ಎಂದೂ ನಾವು ಮಾತನಾಡಿಕೊಂಡಿದ್ದೇ ಇಲ್ಲ. ಆಕೆಯೂ ಎಂದೂ ಹೇಳಿಕೊಂಡಿಲ್ಲ. ನನಗೆ ಬಾಲ್ಯ ಎಂಬುದು ಇರಲಿಲ್ಲ. ಬಹಳ ಕಷ್ಟಪಟ್ಟು ಮೇಲೆ ಬಂದೆ. ಎಲ್ಲೆಲ್ಲೋ ಕೆಲಸಕ್ಕೆ ನಿಂತು, ಶ್ರಮಿಸಿ ಈ ಹಂತ ತಲುಪಿದೆ. ನನಗೂ ಬಾಲ್ಯ ಬರೀ ನೋವೇ ನೀಡಿದೆ.'

'ಆಕೆ ಕುಟುಂಬದ ಭದ್ರತೆಯಲ್ಲಿ ಬೆಳೆದವರು. ಆಕೆಗೆ ಹೇಳಿಕೊಳ್ಳಲು ಬಹಳಷ್ಟು ಇದ್ದಿರಬಹುದು. ನೀವು ಎಂದೂ ಅರಿಯುವ ಪ್ರಯತ್ನ ಮಾಡಲಿಲ್ಲವೇ?'

'ನಿವಿಗೆ ಹೇಳಿಕೊಳ್ಳುವ ಅಭ್ಯಾಸವೇ ಇಲ್ಲ. ಅವಳು ಮಿತಭಾಷಿ. ನಾನು ಪ್ರಶ್ನಿಸಿದರಷ್ಟೇ ಉತ್ತರ ಕೊಡುತ್ತಾಳೆ ಅಷ್ಟೇ. ಆಕೆ ಹೆತ್ತವರನ್ನು ಬಿಟ್ಟು ಬೇರೊಬ್ಬರ ಬಳಿ ಮುಕ್ತವಾಗಿ ಬೆರೆಯುವುದನ್ನು ನಾನು ಕಂಡಿಲ್ಲ. ಆಕೆಯ ಕಸಿನ್ ಬಳಿಯೂ ಅಷ್ಟೇ. ಅವಳೊಂದು ಮುಚ್ಚಿದ ಪುಸ್ತಕದ ಥರ'.

ಪ್ರದೀಪ ನುಡಿದಾಗ ಡಾ.ರೂಪಾ ತಮ್ಮ ಕುರ್ಚಿಗೊರಗಿ ಕುಳಿತು ಪ್ರಶ್ನೆಯ ಸರಪಳಿಯನ್ನು ತುಂಡರಿಸಿದರು.

'ಇವತ್ತು ಇಷ್ಟು ಸಾಕು. ನೀವು ಹೇಳಿದ್ದು ಸರಿ. ನಿವೇದಿತಾ ಒಂದು ಮುಚ್ಚಿದ ಪುಸ್ತಕದ ಥರ ಇದ್ದಾರೆ. ನೀವು ಹೇಳಿದ್ದನ್ನೆಲ್ಲಾ ಕೇಳಿಸಿಕೊಂಡ ಬಳಿಕ, ಇನ್ನು ಈ ಮುಚ್ಚಿದ ಪುಸ್ತಕದ ಪುಟಗಳಲ್ಲಿ ಯಾವ ಕಥೆ ಅಡಗಿದೆ ಎಂದು ಅರಿಯಬೇಕಿದೆ. ಅದಕ್ಕೆ ಅವರನ್ನು ಮಾತನಾಡಿಸಬೇಕು. ಮುಂದಿನ ಸೆಷನ್ ಅವರೊಂದಿಗೆ'.

'ಇದು ಎಲ್ಲಿಯವರೆಗೆ ಹೀಗೆ? ಬರಿಯ ಮಾತುಕತೆಯಿಂದ ಸಮಸ್ಯೆಯನ್ನು ಅರಿಯಬಹುದಾ? ಪತಿಯಾಗಿ ನನ್ನ ಬಳಿಯೂ ಏನನ್ನೂ ಹೇಳಿಕೊಳ್ಳದ ನಿವಿಯ ಬಾಯಿಂದ ನಿಮಗೆ, ತಾನೇನು ಮಾಡುತ್ತೇನೆಂದೇ ಅರಿವಿರದ ಆಕೆಯೇ ತನ್ನ ವಿಕ್ಷಿಪ್ತ ನಡವಳಿಕೆಯ ಕಾರಣ ತಿಳಿಸುತ್ತಾಳಾ? ಇದನ್ನು ಬಗೆಹರಿಸಬಹುದಾ?' ಅವನು ಅಪನಂಬಿಕೆಯಿಂದ ಪ್ರಶ್ನಿಸಿದ.

'ಸಮಸ್ಯೆಯ ಮೂಲ ಅರಿಯದೇ ಉಪಶಮನ ನೀಡುವುದಾದರೂ ಹೇಗೆ? ಅದಕ್ಕೆ ಇಬ್ಬರ ಅಂತರ್ಯವನ್ನೂ ಅರಿಯಬೇಕಿದೆ. ಅದರೊಳಗೆ ಏನು ಹುದುಗಿದೆ, ಈ ವ್ಯತಿರಿಕ್ತ ನಡವಳಿಕೆಗೆ ಕಾರಣವೇನು? ಯಾವ ಪದರುಗಳಲ್ಲಿ ಯಾವ ಸನ್ನಿವೇಶ ಅಥವಾ ಘಟನೆಯ ಪ್ರಭಾವ ಈಗ ಹೊರಗೆ ಚೆಲ್ಲಿ ಈ ರೂಪದಲ್ಲಿ ವ್ಯಕ್ತವಾಗಿದೆ ಎಂದು ಗೊತ್ತಾಗಬೇಕಿದೆ'.

'ಮಾತೇ ಆಡದ ನಿವಿ ನಿಮ್ಮ ಬಳಿ ಬಾಯಿ ಬಿಡುತ್ತಾಳೆ ಎಂಬ ನಂಬಿಕೆ ನನಗಿಲ್ಲ.'

'ಅದು ನನ್ನ ಕೆಲಸ. ನೀವು ಚಿಂತೆ ಮಾಡಬೇಡಿ. ನೀವಿನ್ನು ಹೊರಡಬಹುದು. ನಾಡಿದ್ದು ಸೋಮವಾರ ಆಕೆಗೆ ಬರಲು ತಿಳಿಸಿ' ಎಂದು ಭೇಟಿಯ ಸಮಯ ನೀಡಿದರು. ಪ್ರದೀಪ ಎದ್ದು ತೆರಳಿದ ಬಳಿಕ ಡಾ. ರೂಪಾ ಆತ ಹೇಳಿದ ಘಟನೆಗಳನ್ನೆಲ್ಲ ಸರದಿ ಪ್ರಕಾರ ಒಂದು ಮಾಲೆಯಲ್ಲಿ ಪೋಣಿಸುವಂತೆ ಜೋಡಿಸಿ ಒಂದೆಡೆ ಗುರುತಿಸಿಟ್ಟರು. ಪ್ರದೀಪ ಹೇಳಿದ್ದರಲ್ಲಿ ಅವರಿಗೆ ಯಾರ ಕೃತ್ರಿಮವೂ ಕಾಣಲಿಲ್ಲ. ಆತನಲ್ಲಿ ಸಮಸ್ಯೆ ಇದೆಯೆಂಬ ಯಾವ ಕುರುಹೂ ಅವರಿಗೆ ಲಭಿಸಲಿಲ್ಲ. ಅಥವಾ ಅವನು ಹೇಳಿಕೊಂಡ ಅದಷ್ಟನ್ನು ಮಾತ್ರ ನನಗೆ ತೋರಿಸಲು ಯತ್ನಿಸಿದನೇ? ಬರೀ ಅವನ ಮಾತುಗಳನ್ನು ಆಲಿಸಿ ತಾನು ಒಂದು ನಿರ್ಣಯಕ್ಕೆ ಬರುವಂತಿಲ್ಲ. ಹಾಗೆ ನೋಡಲು ಹೋದರೆ ಸಮಸ್ಯೆಯ ಮೂಲ ಎಲ್ಲಿದೆ ಎಂಬ ಸುಳಿವು ತನಗಿನ್ನೂ ದೊರೆತಿಲ್ಲ!